**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-05-69.**

(ओम शान्ति, बापदादा. अव्यक्त मुरली 26-05-1969)

***ಸಂಪೂರ್ಣ ಸ್ನೇಹಿಯ ಪರಿಶೀಲನೆ.*** (सम्पूर्ण स्नेही की परख)

ಎಲ್ಲರೂ ಯಾವ ಸ್ಥಿತಿಯಲ್ಲಿ ಕುಳಿತಿರುವಿರಿ? ಸಂಬಂಧ ಜೋಡಿಸುವ ಅವಸ್ಥೆಯಲ್ಲೋ ಅಥವಾ ಮಗ್ನ ಅವಸ್ಥೆಯಲ್ಲೋ? ಹೆಚ್ಚು ಸಮಯ ಸಂಬಂಧ ಜೋಡಿಸುವಲ್ಲಿಯೋ ಅಥವಾ ಮಗ್ನ ರೂಪದಲ್ಲಿಯೋ? ತಮ್ಮ ಪರಿಶೀಲನೆ ಮಾಡಿಕೊಳ್ಳುತ್ತಿರಬೇಕಲ್ಲ. ಒಳ್ಳೆಯದು. ನಮ್ಮ ಪರೀಕ್ಷೆಯ ಫಲಿತಾಂಶ ಗೊತ್ತಾಗಬೇಕೆಂಬ ಇಚ್ಛೆ ಎಲ್ಲರದೂ ಆಗಿತ್ತು. ವಿಶೇಷ ಎಲ್ಲರ ಮನದಲ್ಲಿ ಇದೇ ಸಂಕಲ್ಪ ನಡೆಯುತ್ತಿರುವುದರಿಂದ ಇಂದು ಫಲಿತಾಂಶವನ್ನು ಹೇಳುತ್ತೇವೆ. ಎಲ್ಲರೂ ಯಥಾಯೋಗ, ಯಥಾಶಕ್ತಿ ಏನೆಲ್ಲಾ ಬರೆದಿರುವಿರೋ ತಂದೆಯಲ್ಲಿ ನಿಶ್ಚಯ ಬುದ್ಧಿಯಿದೆ, ಆದರೆ ಎಷ್ಟು ತಂದೆಯ ಮೇಲೆ ನಿಶ್ಚಯವಿದೆಯೋ ಅಷ್ಟು ತಂದೆಯ ಮಹಾವಾಕ್ಯಗಳಲ್ಲಿ, ಆದೇಶಗಳಲ್ಲಿ ನಿಶ್ಚಯ ಬುದ್ಧಿಯವರಾಗಿ ಪುರುಷಾರ್ಥ ಮಾಡುವಲ್ಲಿ 50% ಕಂಡುಬರುತ್ತದೆ ಎಂದು ಒಟ್ಟು ಫಲಿತಾಂಶ ಹೇಳಲಾಗುತ್ತದೆ. ತಂದೆಯಲ್ಲಿ ನಿಶ್ಚಯ 100% ಇದೆ ಆದರೆ ತಂದೆಯ ಆದೇಶ ಮತ್ತು ಆಜ್ಞೆಗಳಲ್ಲಿ ನಿಶ್ಚಯ ಬುದ್ಧಿಯಿಂದ ನಡೆಯುವವರು, ಆದೇಶದ ಪಾಲನೆ ಮಾಡುವ ನಿಶ್ಚಯ ಬುದ್ಧಿಯ ಬಹುಸಂಖ್ಯಾತರು 50%ರ ಫಲಿತಾಂಶದಲ್ಲಿದ್ದಾರೆ. ಅದೇ ರೀತಿ ಶಿಕ್ಷಕನ ಮೇಲೆ ನಿಶ್ಚಯವಿದೆ ಆದರೆ ಅವರ ಶಿಕ್ಷಣದಂತೆ ಪೂರ್ಣ ರೀತಿ ನಡೆಯುವಲ್ಲಿಯೂ ತಮ್ಮದೇ ಆದ ಪ್ರತಿಶತ ಫಲಿತಾಂಶವಿದೆ. ಅದೇ ರೀತಿ ಗುರುವಿನ ರೂಪದಲ್ಲೂ ಸದ್ಗುರುವಾಗಿದ್ದಾರೆ ಎಂಬುದರಲ್ಲಿ ಪೂರ್ಣ ನಿಶ್ಚಯವಿದೆ, ಆದರೆ ಅವರ ಶ್ರೀಮತದಂತೆ ನಡೆಯುವಲ್ಲಿ ಒಟ್ಟು ಫಲಿತಾಂಶ 50%ರಷ್ಟಿದೆ. ಕೇವಲ ತಂದೆ, ಶಿಕ್ಷಕ, ಸದ್ಗುರುವಿನಲ್ಲಿ ನಿಶ್ಚಯವಲ್ಲ, ಈ ನಿಶ್ಚಯದೊಂದಿಗೆ ಅವರ ಆದೇಶ, ಶಿಕ್ಷಣ ಮತ್ತು ಶ್ರೀಮತದಲ್ಲಿಯೂ ಸಂಪೂರ್ಣ ನಿಶ್ಚಯ ಬುದ್ಧಿಯವರಾಗಿ ನಡೆಯುವುದರಲ್ಲಿ ಕೊರತೆಯಿದೆ ಅದನ್ನು ಈಗ ತುಂಬಿಕೊಳ್ಳಬೇಕು.

ಸ್ನೇಹದ ಲಕ್ಷಣವೇನು? ಸಂಪೂರ್ಣ ಸ್ನೇಹಿಯ ಪರಿಶೀಲನೆಯೇನು? ಅವರ ಮುಖ್ಯ ಗುರಿಯೇನು? ತಾವೆಲ್ಲರೂ ಹೇಳಿದ್ದು ಸರಿಯೇ. ಯಾರೊಂದಿಗೆ ಸ್ನೇಹವಿರುತ್ತದೆಯೋ ಅವರ ಮುಖದಲ್ಲಿ ಅದೇ ಸ್ನೇಹದ ಮುಖ ಕಂಡು ಬರುತ್ತದೆ. ಅವರ ನಯನಗಳಿಂದ ಅದೇ ಕಾಂತಿ, ಮುಖದಿಂದ ಸ್ನೇಹದ ಮಾತು, ಅವರ ನಡೆನುಡಿಯಲ್ಲಿ ಸ್ನೇಹದ ಚಿತ್ರ ಕಂಡುಬರುತ್ತದೆ. ಅವರಲ್ಲಿ ಅದೇ ಸ್ನೇಹ ಸಮಾವೇಶಗೊಂಡಿರುವುದು. ಆದರೆ ಅದನ್ನು ಸ್ಪಷ್ಟ ಮಾಡಲು ಇಂತಹ ಸ್ಥಿತಿ ಈಗಾಗಬೇಕು. ಇನ್ನೂ ಮಕ್ಕಳ ಮತ್ತು ತಂದೆಯ ಸಂಸ್ಕಾರಗಳಲ್ಲಿ ಬಹಳ ಅಂತರವಿದೆ. ಯಾವಾಗ ಸಮಾನವಾಗುವವೋ ಆಗ ತಮ್ಮ ಸಂಸ್ಕಾರಗಳು ಕಂಡು ಬರುವುದಿಲ್ಲ. ಒಬ್ಬೊಬ್ಬರಲ್ಲಿ ತಂದೆಯೇ ಕಂಡು ಬರುವರು. ತಮ್ಮೆಲ್ಲರ ಮುಖಾಂತರ ತಂದೆಯ ಸಾಕ್ಷಾತ್ಕಾರವಾಗುವುದು. ಆದರೆ ಅದೀಗ ಕಡಿಮೆಯಿದೆ. ಇಂತಹ ಸ್ನೇಹಿಯಾಗಿರುವೆವಾ? ಎಂದು ತಮ್ಮನ್ನು ತಾವೇ ಕೇಳಿಕೊಳ್ಳಿ ಸ್ನೇಹ ಜೋಡಿಸಿಕೊಳ್ಳುವುದು ಸಹಜವಾಗಿದೆ. ಆದರೆ ಸ್ನೇಹಸ್ವರೂಪವಾಗುವುದು ಅಂತಿಮ ಸ್ಥಿತಿಯಾಗಿದೆ. ಪರೀಕ್ಷೆಯ ಫಲಿತಾಂಶವನ್ನು ತಿಳಿಸಿದೆವು. ಇದು ಒಂದು ಕೊರತೆಯಾದರೆ ಎಲ್ಲರೂ ಬರೆದಿರುವಂತೆ ಸಹನೆಶಕ್ತಿಯ ಫಲಿತಾಂಶ ಬಹಳ ಕಡಿಮೆಯಾಗಿದೆ ಎಂಬುದು ಇನ್ನೊಂದಾಗಿದೆ. ಎಷ್ಟು ಸಹನೆಶಕ್ತಿಯಿರುವುದೋ ಅಷ್ಟು ಸೇವೆಯಲ್ಲಿ ಸಫಲತೆ ಸಿಗುವುದು, ಸಂಘಟನೆಯಲ್ಲಿರಲು ಸಹನೆಶಕ್ತಿ ಬೇಕು, ಅಂತಿಮ ವಿನಾಶದ ಪರೀಕ್ಷೆಯಲ್ಲಿಯೂ ಪಾಸಾಗಲೂ ಸಹನೆಶಕ್ತಿ ಬೇಕು, ಆ ಸಹನೆಶಕ್ತಿಯ ಫಲಿತಾಂಶವೂ ಬಹುಸಂಖ್ಯಾತರಲ್ಲಿ ಬಹಳ ಕಡಿಮೆಯಿದೆ ಆದ್ದರಿಂದ ಅದನ್ನು ಈಗ ಹೆಚ್ಚಿಸಿಕೊಳ್ಳಿ, ಸಹನಶಕ್ತಿ ಹೇಗೆ ಬರುವುದು? ಎಷ್ಟೆಷ್ಟು ಸ್ನೇಹಿಗಳಾಗುವಿರೋ, ಯಾರ ಸ್ನೇಹ ಯಾರೊಂದಿಗೆ

ಇದೆಯೋ ಆ ಸ್ನೇಹದಲ್ಲಿ ಶಕ್ತಿ ಬರುತ್ತದೆ. ಸ್ನೇಹದಲ್ಲಿ ಸಹನೆಶಕ್ತಿ ಹೇಗೆ ಬರುತ್ತದೆಯೆಂದು ಎಂದಾದರೂ ಅನುಭವ ಮಾಡಿರುವಿರಾ? ಮಗುವಿಗೆ ಆಪತ್ತು ಬಂದಾಗ ತಾಯಿಗೆ ಸ್ನೇಹವಿರುವ ಕಾರಣ ಅವಳಲ್ಲಿ ಸಹನೆಶಕ್ತಿ ಬರುತ್ತದೆ. ಮಗುವಿಗಾಗಿ ಎಲ್ಲವನ್ನು ಸಹನೆ ಮಾಡಲು ಸಿದ್ಧಳಾಗುತ್ತಾಳೆ, ಆ ಸಮಯದಲ್ಲಿ ತನ್ನ ಶರೀರದ ಅಥವಾ ಪರಿಸ್ಥಿತಿಗಳ ಚಿಂತೆ ಅವಳಿಗಿರುವುದಿಲ್ಲ. ಅದೇ ರೀತಿ ನಿರಂತರ ಸ್ನೇಹವಿದ್ದರೆ ಸಹನೆ ಮಾಡಿಕೊಳ್ಳುವುದು ದೊಡ್ಡ ಮಾತಲ್ಲ, ಸ್ನೇಹ ಕಡಿಮೆ ಇದೆ, ಆದ ಕಾರಣ ಸಹನೆಶಕ್ತಿಯೂ ಕಡಿಮೆ ಇದೆ. ಇನ್ನು ಒಂದು ತಿಂಗಳ ನಂತರ ಫಲಿತಾಂಶವನ್ನು ನೋಡುವೆವು. ಅಲ್ಲಿ ಮೂರು ತಿಂಗಳಿಗೊಮ್ಮೆ ಪರೀಕ್ಷೆಯಿರುತ್ತದೆ. ಇಲ್ಲಿ ಒಂದು ತಿಂಗಳ ನಂತರ ಎಷ್ಟು ಸ್ನೇಹಸ್ವರೂಪರಾಗಿದ್ದೀರಿ ಎಂಬ ಫಲಿತಾಂಶವನ್ನು ನೋಡುತ್ತೇವೆ.

ಪರೀಕ್ಷೆಯಲ್ಲಿ ಕೊಡದೆ ಇರುವ ನಿರ್ಭಯತೆಯ ಗುಣವೂ ಮುಖ್ಯವಾಗಿದೆ. ಏಕೆಂದರೆ ಅದರ ಕೊರತೆ ಬಹಳ ಇದೆ. ಒಂದು ತಿಂಗಳೊಳಗೆ ಈ ನಿರ್ಭಯತೆಯ ಗುಣವನ್ನು ಸಹ ತಮ್ಮಲ್ಲಿ ಪೂರ್ಣ ಧಾರಣೆ ಮಾಡುವ ಪ್ರಯತ್ನ ಮಾಡಬೇಕು. *ನಿರ್ಭಯತೆ ಹೇಗೆ ಬರುವುದು? ಅದಕ್ಕಾಗಿ ಮುಖ್ಯ ಪುರುಷಾರ್ಥ ಯಾವುದು? ನಿರಾಕಾರಿಯಾಗುವುದು. ಎಷ್ಟು ನಿರಾಕಾರಿ ಸ್ಥಿತಿಯಲ್ಲಿರುವಿರೋ ಅಷ್ಟು ನಿರ್ಭಯರಾಗಿರುವಿರಿ,* ಭಯ ಶರೀರದ ಅಭಿಮಾನದಲ್ಲಿ ಬರುವುದರಿಂದ ಬರುತ್ತದೆ. ಈ ಒಂದು ಮಾಸದ ಚಾರ್ಟ ಮೊದಲೇ ಹೇಳುತ್ತೇವೆ. ಕುಮಾರಿಯರ ತರಬೇತಿ ಪೂರ್ಣವಾದಾಗ ಸಹನಶಕ್ತಿ, ನಿರ್ಭಯತೆ ಮತ್ತು ನಿಶ್ಚಯದ ಪರಿಶೀಲನೆ ಎಲ್ಲಿಯವರೆಗೆ ಬಂದಿದೆಯೆಂದು ಕೇಳುವೆನು. ಈ ಮೂರು ಮಾತುಗಳ ಬಗ್ಗೆ ಪರೀಕ್ಷೆಯನ್ನು ಮತ್ತೆ ತೆಗೆದುಕೊಳ್ಳಬೇಕು.

ಕುಮಾರಿಯರೊಂದಿಗೆ ಬಾಪ್ ದಾದಾರವರ ವಿಶೇಷ ಸ್ನೇಹವೇಕೆ ಇದೆ? ಬಾಪ್ ದಾದಾರವರ ವಿಶೇಷ ಸ್ನೇಹವಿರುವಂತಹ ಯಾವ ವಿಶೇಷ ಮಾತಾಗಿದೆ? ಏಕೆಂದರೆ ಇವರಿಗೆ ಈಶ್ವರೀಯ ಸ್ನೇಹ ಸಿಗದಿದ್ದರೆ ಬೇರೆ ಯಾರದೋ ಸ್ನೇಹದಲ್ಲಿ ಸಿಕ್ಕಿಕೊಳ್ಳುತ್ತಾರೆಂದು ಬಾಪ್ ದಾದಾರವರಿಗೆ ಗೊತ್ತಿದೆ. ತಂದೆ ದಯಾಸಾಗರ. ಭವಿಷ್ಯದ ರಕ್ಷಣೆಗಾಗಿ ವಿಶೇಷ ಸ್ನೇಹವಿದೆ. ಬಾಪ್ ದಾದಾರವರ ಸ್ನೇಹದ ಉತ್ತರವನ್ನು ಏನೆಂದು ಕೊಡುವಿರಿ ಎಂದು ಈಗ ನೋಡೋಣ. ತಮ್ಮ ರಕ್ಷಣೆ ಮಾಡಿಕೊಳ್ಳಬೇಕು ಇದಾಗಿದೆ ಬಾಪ್ ದಾದಾರವರ ಸ್ನೇಹದ ಪ್ರತ್ಯುತ್ತರ. ಯಾವ ಮಾತುಗಳಲ್ಲಿ ರಕ್ಷಿಸಿಕೊಳ್ಳಬೇಕು ಗೊತ್ತೇ? ಒಂದು ಮನಸ್ಸಿನ ಪವಿತ್ರತೆ. ಮನಸ್ಸಿನಲ್ಲಿ ಯಾವುದೇ ಸಂಶಯವಿರಬಾರದು ಮತ್ತು ಅಂತಿಂಥ ಶಬ್ದಗಳು ಬರದಂತೆ ತಮ್ಮ ವಚನಗಳಿರಲಿ, ಮಾತಿನಲ್ಲೂ, ಮನಸ್ಸಿನಲ್ಲೂ ನಿಯಂತ್ರಣ, ಸಾಕಾರದಲ್ಲಿ ಬಾಪ್ ದಾದಾರವರಂತೆ ಮಾತಿರಬೇಕು. ಸಾಕಾರ ತನುವಿನಿಂದ ಮಾಡಿ ತೋರಿಸಿದಂತೆ ಕರ್ಮಗಳಿರಬೇಕು. ಬೇರೆಯವರು ನೋಡಿ ಮಾಡುವಂತಹ ಕರ್ಮಗಳಿರಬೇಕು. ಇದಾಗಿದೆ ವಿಶೇಷವಾಗಿ ಕುಮಾರಿಯರಿಗೆ, ಮತ್ತೆ ಯಾರಿಂದ ರಕ್ಷಿಸಿಕೊಳ್ಳಬೇಕು? ಸಂಘದೋಷದಿಂದಲಂತೂ ರಕ್ಷಿಸಿಕೂಳ್ಳಲೇಬೇಕು. ಇನ್ನು ಒಂದು ವಿಶೇಷವಾದ ಮಾತಿದೆ ಆತ್ಮಗಳ ರೂಪದಿಂದ, ಶರೀರದ ರೂಪದಿಂದ ತಮ್ಮನ್ನು ಆಕರ್ಷಿಸುವ ಅನೇಕ ರೂಪಗಳು ಎದುರಿಗೆ ಬರುವವು ಆದರೆ ಅದರಿಂದ ಆಕರ್ಷಿತರಾಗಬೇಡಿ. ಅನೇಕ ಪರೀಕ್ಷೆಗಳು ಬರುವವು ಆದರೆ ಅವು ಏನೂ ಅಲ್ಲ. ಪರೀಕ್ಷೆಗಳಲ್ಲಿ ಯಾರು ಉತ್ತೀರ್ಣರಾಗುತ್ತಾರೆ? ಯಾರಲ್ಲಿ ಪೂರ್ಣ ಪರೀಕ್ಷಿಸುವ ಶಕ್ತಿಯಿರುವುದೋ ಅವರು. ಎಷ್ಟು ಪರೀಕ್ಷಿಸುವ ಶಕ್ತಿಯೋ ಅಷ್ಟು ಪರೀಕ್ಷೆಗಳನ್ನು ಪಾಸು ಮಾಡುವರು. ಇದು ಯಾವ ಪ್ರಕಾರದ ವಿಘ್ನವಾಗಿದೆ, ಮಾಯೆ ಯಾವ ರೂಪದಲ್ಲಿ ಬರುತ್ತಿದೆ ಮತ್ತು ಏಕೆ ನನ್ನೆದುರಿಗೆ ಈ ವಿಘ್ನ ಬಂದಿದೆ ಎಂದು ಪರೀಕ್ಷಿಸುವ ಶಕ್ತಿ ಕಡಿಮೆಯಿರುವ ಕಾರಣ ಪರಿಶೀಲನೆ ಮಾಡಲಾಗುವುದಿಲ್ಲ ಆಗ ಪರಿಣಾಮವೇನಾಗುತ್ತದೆ? ನಪಾಸಾಗುತ್ತೀರಿ. ಪರಿಶೀಲನೆ ಸರಿಯಿದ್ದರೆ ಪಾಸಾಗುತ್ತೀರಿ. ಒಳ್ಳೆಯದು. ಓಂ ಶಾಂತಿ !

ಅವ್ಯಕ್ತ ಮುರಳಿ 26-05-1969

***ಸಂಪೂರ್ಣ ಸ್ನೇಹಿಯ ಪರಿಶೀಲನೆ***

ಯೋಗ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ತಂದೆ, ಟೀಚರ್, ಸದ್ಗುರುವಿನ ಮೇಲೆ ನಿಶ್ಚಯದೊಂದಿಗೆ ಅವರ ಆಜ್ಞೆ, ಓದು, ಮತ್ತು ಶ್ರೀಮತದ ಮೇಲೆಯೂ100% ನಿಶ್ಚಯವಿರುವ ಸಂಪೂರ್ಣ ನಿಶ್ಚಯ ಬುದ್ಧಿ ಸ್ವರೂಪ.

2. ನಾನು ನನ್ನ ಸಂಸ್ಕಾರಗಳಿಂದ ತಂದೆಯನ್ನು ಸಾಕ್ಷಾತ್ಕಾರ ಮಾಡುವ ಸಾಕ್ಷಾತ್ಕಾರ ಮೂರ್ತಿ.

3. ನಾನು ಸಹನಶಕ್ತಿ ಸ್ವರೂಪ.

4. ನಾನು ಸ್ನೇಹ ಸ್ವರೂಪ.

5. ನಾನು ನಿರಾಕಾರ ಸ್ಥಿತಿಯನ್ನು ಧಾರಣೆ ಮಾಡಿರುವ ನಿರ್ಭಯ ಸ್ವರೂಪ.

6. ನಾನು ಮನಸ್ಸಿನಲ್ಲಿ, ಮಾತಿನಲ್ಲಿ ಯಾವುದೇ ಸಂಶಯವಿಲ್ಲದೆ ನನ್ನನ್ನು ನಾನು ರಕ್ಷಿಸಿಕೊಂಡು ಬಾಪ್ ದಾದಾರವರಿಗೆ ಸ್ನೇಹದ ಪ್ರತಿಕ್ರಿಯೆಯನ್ನು ಕೊಟ್ಟಿದ್ದೇನೆ.

7. ನಾನು ಮನಸಾ, ವಾಚ, ಕರ್ಮಣಾ ಬ್ರಹ್ಮಾ ತಂದೆಯನ್ನು ಅನುಸರಿಸುತ್ತಿದ್ದೇನೆ.

8. ನಾನು ಪ್ರತಿಯೊಂದು ಪರಿಸ್ಥಿತಿಯಲ್ಲಿ ಸಂಪೂರ್ಣ ಪರಿಶೀಲನೆಯಿಂದ ಪರೀಕ್ಷೆಗಳಲ್ಲಿ ಪಾಸ್ ಆಗಿದ್ದೇನೆ.